ಸುಮ್ಮನಾಗುತ್ತಿದ್ದರು. ಅಂತೂ ಹಪ್ಪಳ ಮಾಡುವ ಕಾಲ ಬಂತೆಂದರೆ ನಮಗೆಲ್ಲ ಮಜವೋ ಮಜ!

ಬಿಸಿಲಿನ ಜೊತೆಜೊತೆಗೇ ಮಳೆ ಹನಿಗಳು ಬಿದ್ದರೆ 'ಕಾಗೆಗೂ ನರಿಗೂ ಮದುವೆ' ಎಂದು ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದೆವು. ಪಕ್ಷಿ ಜಾತಿಯ ಕಾಗೆಯೆಲ್ಲಿ, ಪ್ರಾಣಿ ಜಾತಿಯ ನರಿಯೆಲ್ಲಿ? ಬಿಸಿಲಿದ್ದಾಗ ಮಳೆ ಬರುವುದು ನಮಗೆ ವಿಸ್ಮಯವೆನಿಸುತ್ತಿತ್ತು. ಕುಣಿಯುವ ಭರದಲ್ಲಿ, ನರಿ ಕಾಗೆಯನ್ನು ಹೊಗಳಿ ಮಾಂಸವನ್ನು ತೆಗೆದುಕೊಂಡು ಹೋದ ಪದ್ಯ ನೆನಪಾಗಿಬಿಡುತ್ತಿತ್ತು. ಅದ್ಹೇಗೆ ತನ್ನನ್ನು ಮೋಸ ಮಾಡಿದ ನರಿಯನ್ನು ಕಾಗೆ ಮದುವೆಯಾಯ್ತು? 'ರತ್ನ ತಿನ್ನೋ ಪಕ್ಷಿ ಕಾಗೆ ಸಾವಾಸಕ್ಕೆ ಬಿದ್ದು ಎಂಜಲೆಲೆಗೆ ಸೋಬತಿ (=ಗತಿ, ಅವಸ್ಥೆ) ಆಗಿತ್ತಂತೆ.' ಹಾಗೆಯೇ ನರಿಯೂ ಕೂಡ ಕಾಗೆಯ ಸಹವಾಸ ಮಾಡಿರಬಹುದು. ಯಾರಿಗೆ ಗೊತ್ತು? ಅದಕ್ಕೇ ಇರಬೇಕು, ಬಿಸಿಲಿದ್ದಾಗಲೂ ಮಳೆ ಬರುತ್ತಿರುವುದು ಎಂದು ನಮ್ಮ ಯೋಚನಾ ಲಹರಿ ಎತ್ತೆತ್ತಲೋ ಸಾಗುತ್ತಿತ್ತು.



ಅಧ್ಯಾತ್ಮದಲ್ಲೂ ಕಾಗೆಯನ್ನು ಉದಾಹರಣೆಯಾಗಿ ತೆಗೆದುಕೊಂಡಿರುವುದನ್ನು ನೋಡಿದರೆ (ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೇ ತನ್ನ ಬಳಗವನ್ನು?–ಬಸವಣ್ಣ) ಕಾಗೆಯಂತಾ ಕಾಗೆಗೇ ಎಂತಹ ಸ್ಥಾನ ಸಿಕ್ಕಿದೆಯಲ್ಲಾ ಎಂದು ಯೋಚಿಸಬಹುದು. ವೈಯಕ್ತಿಕ ಸಾಧನೆಯ ಫಲವನ್ನು ಅಥವಾ ಸಂತೋಷವನ್ನು ತಾವೊಬ್ಬರೇ ಅನುಭವಿಸುವುದಕ್ಕಿಂತ ಇತರರೊಂದಿಗೆ ಹಂಚಿಕೊಂಡಾಗಲೇ ಅದು ಇನ್ನಷ್ಟು ಅಧಿಕವಾಗುವುದು. ಕಾಗೆಯು ಆಹಾರದ ಒಂದು ತುಣುಕನ್ನು ಕಂಡರೂ ಅದನ್ನು ಹಂಚಿ ತಿನ್ನಲು 'ಕಾ...ಕಾ...' ಎಂದು ತನ್ನ ಬಳಗವನ್ನು ಕರೆಯುತ್ತದೆ. ಹಂಚಿ ತಿನ್ನುವ ಗುಣವು ಕಾಗೆಗಳಲ್ಲಿ ರಕ್ತಗತವಾಗಿ ಬಂದಿರುವ ಮುಖ್ಯ ಸ್ವಭಾವವಾಗಿದೆ. ಇದನ್ನು ಪರೀಕ್ಷೆ ಮಾಡಬೇಕು ಅಂತಾನೇ ಸಣ್ಣವರಿದ್ದಾಗ ಅಡುಗೆಮನೆಯಿಂದ ಒಂದಷ್ಟು ಅನ್ನ ತಂದು ಅಂಗಳದಲ್ಲಿ ಹಾಕಿದ ಸ್ವಲ್ಪ ಹೊತ್ತಿನಲ್ಲೇ ಒಂದು ಕಾಗೆ ಬಂದು 'ಕಾ...ಕಾ...' ಅಂತ ಕೂಗಿದೊಡನೆ ಇನ್ನೊಂದಿಷ್ಟು ಕಾಗೆಗಳು ಬರುವುದನ್ನು ನೋಡಿ ಖುಷಿಪಡುತ್ತಿದ್ದೆವು.